‘ತವ ಒಲೆ ಮ್ಯಾಕೆ ಮಡಗಿವ್ನಿ, ಸ್ಕೂಲಿಗೋಗೊ ಮುನ್ನ ರೊಟ್ಟಿ ತಟ್ಟಿ ಹ್ವಾಗೆಲೆ, ನಾ ಒಲ್ಲೆ ಅನ್ನಹಂಗಿಲ್ಲ ತಿಳೀತ’ ಅವ್ವ ಹರಿಬರಿಯಿಂದ ಹಂಗೇಳಿ ಎಲ್ಲಿಗೋಗ್ತವ್ಳೆ, ಓ! ಅದಾ ಸಮಾಚಾರ, ಯಾರನ್ನೋ ಮಡಕೊಂಡವ್ಳಲ್ಲ ಅವನ್ ತಾವ ಏನು ಕೆಲ್ಸ ಐತೋ ಹೋಗವ್ಳೆ, ನಾನ್ಯಾಕೆ ರೊಟ್ಟಿ ತಟ್ಲಿ; ನನ್ನೇನ ಅವ್ಳು ಪಿರೂತಿ ಮಾಡಾಳೇನು? ಯಾವಾಗ ಕಂಡ್ರು ಮೊಖ ಉಮ್ಮ್ಮ ಅಂತ ಗಂಟಿಕ್ಕಿಕ್ಕೊಂಡಿರೋದೇಯ. ಯಾಕೆ ನಾನೇನು ತಪ್ಪು ಮಾಡಿವ್ನಿ’ ಅವ್ವ ತನಗಾಗಿ ಮಾಡಿಟ್ಟು ಹೋದ ರೊಟ್ಟಿಯನ್ನು ಮುರಿದು ಬಾಯಿಗಿಟ್ಟುಕೊಳ್ಳುತ್ತ ಪಂಕಜ ಅವ್ವನ್ನ ಕುರಿತು ಯೋಚಿಸಿದಳು.

ಅವ್ವನ್ನ ಮಡಕೊಂಡವ್ನಲ್ಲ ಅವ್ನೇನು ಸಣ್ಣ ಮನ್ಸನಲ್ಲಪ್ಪೋ ಅವ್ನ ತಾವ ಕಾರಯ್ತೆ; ಕಾರ್‌ನಾಗ ಬತ್ತಾನೆ ಹೋತಾನೆ. ಅವ್ಳನ್ನ ಕರ್ಕೊಂಡು ಹೋಗೋದನ್ನ ಕಂಡಿವ್ನಿ. ಅವ್ಳ ಮೊಖ ನೋಡ್ಬೇಕು ಆ ಹೊತ್ನಾಗ; ಹೆಂಗಿರ್ತದೆ ಗೊತ್ತಾ, ಮುದ್ದು ಕಂದ ಅಂಬೆಗಾಲಿಕ್ಕಂಡು ಅವ್ವನ ಹತ್ರ ಬರೋ ಹೊತ್ಗೆ ಅವ್ವಂದಿರ ಮೊಖ ಅರಳಕ್ಕಿಲ್ವ ಅಂಗಿರ್ತದೆ ಅವ್ವನ ಮೊಖ. ಅವ್ನು ಗುಡ್ಲ ತಂಕ ಕಾರ್‌ನ ತಕ್ಕೊಂಡು ಬರ್ದಿದ್ರೇನಂತೆ, ಶಾಲೆ ತಾವ ಒಂದಪ ಕಂಡಿವ್ನಲ್ಲ. ಅವ್ವ ಅವ್ನ ಗುಡ್ಲು ತಾವ ಬರ್‌ಕೂಡ್ದು ಅಂದವ್ಳೇನೋ. ಹಣವಂತ ಏನು ಮಾಡಕೂ ಹೇಸೋನಲ್ಲ ಮಹಾರಾಜ ಇದ್ದಗಂವ್ನೆ. ನಮ್ಮವ್ವ ಅವ್ನಿಗೆ ಸಾಟಿನ. ನಾಲ್ಕು ಮನೆ ಮುಸುರೆ ತಿಕ್ಕಿ ಜೀವ್ನ ಮಾಡೋಳು, ಕಾಸಯ್ತು ಕರಿಮಣಿ ಅಯ್ತು; ಅವ್ಳ ಕೂಟೆ ಹೋಗ್ಲಿ ಅಂದ್ರೆ ಒಂದು ಮನೆ ಐತ ಬದುಕು ಮಾಡೋಕೆ, ಯಾವ್ದೊಂದು ಇಲ್ದೋಳ್ನ ಹ್ಯಾಂಗಪ್ಪ ಒಪ್ಕೊಂಡು ಇಟ್ಕೊಂಡವ್ನೆ. ಒಂದಪ ಅವ್ವ ಬೊಗಳ್ಕೋತಿದ್ದುದನ್ನ ಕೇಳ್ಕಂಡಿದ್ಲು ಪಂಕಜ.

ಅದು ಜಪ್ತಿಗೆ ಬತ್ತದೆ. ನನ್ನ ಮಡ್ಕಂಡಿರಾದು ಸುಮ್ಕೆನ ಅವ್ನು ಕೇಳ್ ಕೇಳ್ದಾಗೆಲ್ಲ ಅವ್ನ ಪಕ್ಕ ಮಲಗೊದೇನು ಸುಮ್ನಾಯ್ತುದ, ಮೈಕೈ ಮೂಳೆಗಳೆಲ್ಲಾ ಮುರ್ದು ಬುಡೋ ಹಂಗೆ ಭೋಗಿಸ್ತಾನೆ. ನನ್ನ ಹಿಗ್ಗಾಮುಗ್ಗ ಮಾಡ್ತ, ಅಷ್ಟಾದ್ರು ಖುಷಿಯಿಲ್ಲ ಆ ಬೋಳಿಮಗನ್ಗೆ. ಎಲ್ಲಿ ಗಂಟು ಬಿದ್ದ ಇವ್ನು. ಏನೇನೆಲ್ಲಾ ಆಸೆ ತೋರ್‌ಸ್ದ, ಈಟು ವರ್ಸ್ ಆತು ಬಂಗಾರದ ಒಂದು ಚೈನ್ ಮಾಡ್ಸಿಕೊಡ್ಲಿಲ್ಲ. ಈಗಿತ್ಲಾಗೆ ಅವ್ನಿಗೆ ನಾನು ಹಳ್ಸದಂಗೆ ಕಾಣ್ತದೆ. ಅವ್ನ ಕಣ್ಣು ಬೇರೊಬ್ಳನ್ನ ಹುಡುಕೋ ಹಂಗೆ ಅದೆ. ಅಂತೋನ್ನ ಗುಡ್ಲ ಹತ್ರಕ್ಕೆ ಬರೋಕೆ ಬುಟ್ಟೇನ. ಬಂಗಾರದಂತ ಮಗ್ಳು ಅವ್ಳೆ. ಬೋ ಚೆಂದಾಗವ್ಳೆ. ಗಿಲೀಟು ಮಾತ್ನಾಡಿ ವಷಕ್ಕೆ ತಗೋಂಡ್ರೆ ಎಂತ ಮಾಡೋದು. ಇಷ್ಟು ವರ್ಷ ಆತು ಅವ್ನ ಗುಣ ಗೊತ್ತಾಗಾಕಿಲ್ವ ನಂಗೆ’ ಎಂದು ಉರು ಹೊಡೆದಂತೆ ಮಾತುಗಳನ್ನು ಆಡುತ್ತಾ ಅವ್ವ ಕೆಲ್ಸದ ಮನೆಗೆ ಹೋದ್ದನ್ನು ಕಂಡಿದ್ದಳು ಪಂಕಜ. ಆಗ್ಲೆ ಪಂಕಜಳಿಗೆ ಸ್ವಲ್ಪ ಸ್ವಲ್ಪ ಅರ್ಥವಾಗೋಗಿತ್ತು. ಹೆಂಡ್ತಿಯಿಂದ ಸಿಗ್ದ ಸುಖವನ್ನ ಅವ್ವನಿಂದ ಬಯಸ್ತಾ ಅವ್ನೆ ಎಂದುಕೊಂಡಿದ್ದಳು. ಅವ್ವ ಕಪ್ಪಾದರೂ ನೋಡೋಕೆ ಚೆಂದಾಕವ್ಳೆ. ರಟ್ಟೆ ತುಂಬಾ ಮಾಂಸ ತುಂಬದೆ. ಗುಂಡುಗುಂಡಗೆ ಇರೋ ಅವ್ವನ ಕೆನ್ನೆ ತುಂಬಿಕೊಂಡ್ಯೆತಲ್ಲ ಸಾಲ್ದ ಎಂದುಕೊಂಡಿದ್ದಳು.

ಇದ್ದಕ್ಕಿದ್ದಂತೆ ಅವ್ವ ರೊಟ್ಟಿ ತಟ್ಟಿ ಹೋಗು ಎಂದದ್ದು ನೆನಪಿಗೆ ಬಂತು, ರೊಟ್ಟಿ ಮಾಡಿಟ್ಟು ಹೋಗಬಾರದು ಎನಿಸಿದರೂ ಮನಸ್ಸು ಕೇಳಲಿಲ್ಲ. ಏನೇ ಆಗ್ಲಿ ಅವ್ಳು ನನ್ ಅವ್ವ, ದುಡ್ಕೊಂಡು ದಣಿದು ಬತ್ತಾಳಲ್ಲ ಅಂತು ಮನ್ಸು. ರೊಟ್ಟಿ ಮಾಡಿಟ್ಟು ಹೋಗೋವ ಎಂದುಕೊಂಡು, ತವವನ್ನು ಒಲೆಯ ಮ್ಯಾಕಿಟ್ಟಳು. ದಣಿದು ಬರುವ ಅವ್ವ ಮಧ್ಯಾಹ್ನ ಅದೆಷ್ಟು ಹೊತ್ತಿಗೆ ಬರ್ತಾಳೋ ಹಸಿದ ಹೊಟ್ಟೆ ತಿಂದ್ಕೊಳ್ಳಿ ಎಂದುಕೊಂಡು ತವವನ್ನು ಒಲೆ ಮ್ಯಾಕೆ ಮಡಗಿ ಒಂದೊಂದಾಗಿ ರೊಟ್ಟಿ ತಟ್ಟಿ ಮುಗಿಸಿದಳು. ಒಲೆಯ ಪಕ್ಕಕ್ಕೆ ರೊಟ್ಟಿ ಮುಚ್ಚಿಟ್ಟು, ಶಾಲೆಗೆ ಹೊರಡಲು ಸಿದ್ಧಳಾದಳು. ಅಂಗಿ ಬದಲಾಯಿಸಲು ಎಲ್ಲದೆ ಅಂಗಿ, ಮನೆಗೂ ಶಾಲೆಗೂ ಹಾಕಿದ್ದನ್ನೇ ಹಾಕೋತ ಇರ್ಬೇಕು. ಕೊಳೆಯಾದರೆ ಮತ್ತೆ ಅದ್ನೇ ಒಗ್ದು ಹಾಕೋಬೇಕು. ಎಲ್ಲವ್ನೆ ಅವ್ವನ ಮಿಂಡ, ಒಂದು ಜೊತೆ ಅಂಗಿ ತೆಗ್ಸಿಕೊಡೋ ಯೋಗ್ಯತೆ ಇಲ್ದೋನು. ಇಂಥವ್ನ ಸಂಗ ಯಾಕ್ ಬಯಸ್ತಾಳೋ ಅವ್ವ ಎಂದು ಅವ್ನ ಒಂದಿಷ್ಟು ಬೈಕೋತ ಶಾಲೆಯ ಬ್ಯಾಗನ್ನು ಹೆಗಲಿಗೇರಿಸಿಕೊಂಡು ಹೊರಟು ಬುಟ್ಲು ಪಂಕಜ.

ಶಾಲೆ ಮುಗ್ಸಿ ಸಂಜೆಕೆ ಗುಡ್ಲಿಗೆ ಬರೋ ಹೊತ್ಗೆ ಅವ್ವ ನೆಲದ ಮ್ಯಾಕೆ ಚಾಪೆ ಹಾಸಿ ಮಲಗಿ ಬುಟ್ಟಿದ್ಲು, ಸೋತು ಹ್ವಾದಂತೆ ಕಾಣ್ತಿದ್ಲು.

‘ಯಾಕವ್ವ ಏನಾಗದೆ’ ಎಂದದ್ದಕ್ಕೆ–

‘ಜ್ವರ ಬಂದ್ಯೆತೆ, ಗಂಟ್ಲಾಗೆ ಕಫ ಕಟ್ಕೊಂಡ್ಯೆತೆ, ಮೈ ಪೂರ ಸಿಡಿಸಿಡಿ ಅಂತ ನೋಯ್ತುದೆ ಪಂಕಜು’ ಎಂದ್ಲು,

‘ಯಾಕವ್ವ ಚೆಂದಾಗಿದ್ಯಲ್ಲವ್ವ, ಆ ವಯ್ಯ ಆಸ್ಪತ್ರೆಗೆ ಕರ್ಕೊಂಡು ಹ್ವಾಗಿ ತೋರ್ಸಿಲ್ವ. ತೋರಿಸ್ದೆ ಹೋಗಿದ್ರೆ ಹೇಳವ್ವ ಕರ್ಕೊಂಡು ಹೋಗ್ತೇನ್ನೇಳು’.

‘ಇಲ್ಲ ಕಾಣಮ್ಮಿ ತೋರ್ಸ್ದ, ಅದೆಂತದೋ ಏಡ್ಸ್ ಬಂದದಂತೆ’

‘ಹಾಗಂದ್ರೆ ಏನವ್ವ, ನಂಗೆ ಗೊತ್ತಾಗ ಹಂಗಿಲ್ಲ’

‘ನನ್ಗಾರ ಏನು ಗೊತ್ತದೆ. ನನ್ನ ಚರಿತ್ರೇನೆಲ್ಲ ನರ್ಸಮ್ಮನ ಕೂಟ ಬಾಯಿ ಬುಟ್ಟದ್ದಕ್ಕೆ ಅವ್ಳಂದ್ಲು, ಆ ಮುಂಡೆ ಗಂಡನ ಸಹವಾಸ ಮಾಡಿದ್ದಕ್ಕೆ ಈ ಕಾಯಿಲೆ ಬಂದದೆ. ಇನ್ನು ಸಾಯೋಗಂಟ ಇದು ನಿನ್ನ ಬುಟ್ಟು ಹೋಗೋಲ್ಲ ಗೊತ್ತದ ನಿಂಗೆ. ನೀ ಇನ್ನು ಮ್ಯಾಕೆ ಗಾಯ ಗೀಯ ಮಾಡ್ಕಳ್ಳ ಹಂಗಿಲ್ಲ, ಏನಾರ ಗಾಯ ಗೀಯ ಮಾಡ್ಕಂಡ್ರೆ ಆ ಗಾಯದ ಮ್ಯಾಕೆ ನೊಣನೋ ಸೊಳ್ಳೆನೋ ಕುಂತು ಸೋಂಕು ಹರಡ್ತದೆ. ಮನೇಲಿ ಮಗ್ಳು ಅವ್ಳೆ ಎಂದ್ಯಲ್ಲ. ಹುಸಾರಾಗಿರು ಅಂದ್ಲು ನಿನ್ನ ಕಾಹಿಲೆ ಮಗ್ಳಿಗೆ ಬಂರದಂಗಿರು’ ಎಂದು ಅಂದ್ಲು ಕಾಣಮ್ಮಿ. ಭಯ ಆಯ್ತುದೆ. ಆಸ್ಪತ್ರೆಗೆ ಹೋಗ್ ಬಂದದ್ದಕ್ಕೆ ಕಾಹಿಲೆ ವಿಸಯ ಗೊತ್ತಾತು. ಓಷಧಿ ಬರ್ಕಟ್ಟವ್ರೆ ಡಾಕ್ಟ್ರಪ್ಪ, ಒಂದಪ ಔಷಧಿ ತೆಗೆಸಿ ಕೊಟ್ಟು ಹೋಗವ್ನೆ ಕೃಷ್ಣಪ್ಪ, ಆಮ್ಯಾಕೆ ಎತ್ತೋ ಎಂತೋ ತಿಳಿಯಹಂಗಿಲ್ಲ ಕಾಣಮ್ಮಿ, ಆಮ್ಯಾಕೆ ಇತ್ತ ಮೊಖ ತೋರ್‌ತಾನೋ ಇಲ್ಲೋ’ ಎಂದು ಮುಸಿ ಮುಸಿ ಅಳತೊಡಗಿದಳು ಅವ್ವ.

‘ಸುಮ್ಕಿರವ್ವ ನಾನಿಲ್ವ ನಿಂಗೆ, ಶಾಲೆ ಬುಟ್ಟು ಕೆಲ್ಸಕ್ಕೆ ಹೋತಿನಿ ಬುಡು, ನೀನು ಎಲ್ಲೆಲ್ಲಿ ಹಿಡ್ಕೊಂಡಿದ್ಯೋ ಅಲ್ಲೆಲ್ಲ ಕೆಲ್ಸ ಮಾಡಿದ್ರಾತು ಬುಡು’

‘ಹಂಗೆಲ್ಲ ಹೇಳ್ ಬ್ಯಾಡ ಮಗ. ಒಂದೆರಡು ದಿನ ಸುಧಾರಿಸಿಕೊಳ್ತೇನೆ, ನೀನು ಓದ್ ಬೇಕು ಮಗ. ನಮ್ಮಂತ ಬಡವ್ರಿಗೆ ಓದು ಅನ್ನೋದು ಮುಖ್ಯ ಕಾಣಮ್ಮಿ’

‘ರೊಟ್ಟಿ ಕೊಡ್ಲ’

‘ಯಾನು ಬೇಡ. ಹೊಟ್ಟೆ ಹಸ್ದಾಗ ನೋಡೋವ, ನೀನು ತಿಂಕೊಂಡು ಓದ್ಕೋ ಮಗ’ ಎಂದ ಅವ್ವ ಎರಡು ದಿವಸದಲ್ಲಿ ಕಣ್ಣು ಮುಚ್ತಾಳೆ ಎಂದು ಅಂದ್ಕೊಂಡಿರಲಿಲ್ಲ ಪಂಕಜ. ಕಾಹಿಲೆ ಅವ್ಳ ಒಳಗೊಳಗೆ ಸುಡ್ತಿತ್ತು ಅಂತ ಕಾಣ್ತದೆ. ಅವ್ಳಿಗೆ ಗೊತ್ತಾಗ್ದೇ ಹೋತು. ಎಂದು ಒಂದೆರಡು ದಿವಸ ಗುಡ್ಲೊಳಗೆ ಮಂಕಾಗಿ ಕುಂತು ಬಿಟ್ಟಿದ್ಲು ಪಂಕಜ. ಆದ್ರೆ ಅವ್ಳು ಏಟೊಂದು ಕನಸುಗಳನ್ನ ಕಟ್ಕೊಂಡಿದ್ಲು. ತಾನು ಓದ್ಲೇ ಬ್ಯಾಕು. ಚೆಂದಾಗಿ ಓದಿ ಒಳ್ಳೆ ಕೆಲ್ಸ ಹಿಡಿ ಬ್ಯಾಕು. ಅವ್ವನ್ನ ಚೆಂದಾಗಿ ಮಡ್ಕಬ್ಯಾಕು, ವಿದ್ಯಾವಂತನಾದೋನ ಕೈ ಹಿಡ್ದು ಒಳ್ಳೆ ಸಂಸಾರ ಮಾಡಬ್ಯಾಕು. ಮಗಗಿಗ ಅದಮ್ಯಾಕೆ ಅದ್ಕೊಂದು ಒಳ್ಳೆ ಬಾಳು ಸಿಗೋ ಹಂಗಾಗ ಬೇಕು. ದೊಡ್ಡದಲ್ಲದಿದ್ರೂನೂವೆ ಚಿಕ್ಕದೊಂದು ಮನೆ ಕಟ್ಟಿ ಬದ್ಕಬ್ಯಾಕು ಏನೆಲ್ಲಾ ಕನಸುಗಳನ್ನು ಕಟ್ಟಿಕೊಂಡಿದ್ಲು. ಅವ್ವ ಸತ್ಲು ಅಂತ ನನ್ನ ಕನಸುಗಳ್ನೆಲ್ಲಾ ಸಾಯ್ಸೋಲ್ಲ ಕಾಯ್ಕೋತೀನಿ ಎಂದುಕೊಳ್ಳುತ್ತಲೇ ಅವ್ವ ಹೋಗುತ್ತಿದ್ದ ಮನೆಗಳಲ್ಲಿ ಕೆಲ್ಸ ಕೇಳ್ಕಂಡು ಹ್ವಾದ್ಲು. ಎರಡು ಮನೆಗಳಲ್ಲಿ ಕೆಲ್ಸನೂ ಸಿಕ್ತು.ಗುಡ್ಲಲ್ಲಿ ಒಬ್ಳೆ ಇದ್ಕೊಂಡು, ದೇವರ್ನ ನಂಬಿ ಶಾಲೆಗೆ ಹೋಗ್ ಬರ್ತಿದ್ಲು ಪಂಕಜ.

ಒಂದು ದಿನ ಅವ್ಳು ಶಾಲೆ ಬುಟ್ಟು ಗುಡ್ಲಿಗೆ ಬರ್ತವ್ಳೆ. ಹಿಂದೆ ಹಿಂದೆ ಬಂದ ಗುಡ್ಲ ಪಕ್ಕದಾಗ ಮನೆ ಕಟ್ತಿದ್ದ ಮೇಸ್ತ್ರಿ ಕೃಷ್ಣಪ್ಪ. ಅವ್ಳು ನಿಂತು ನೋಡವ್ಳೆ. ಅವ್ನು ಬೆನ್ನು ಬುಡ್ದೆ ಬರ್ತಾನೆ ಅವ್ನೆ. ಬೇಗ ಬೇಗ ನಡೆದು ಗುಡ್ಲು ಬಾಗ್ಲು ಹಾಕೊಂಡ್ಲು ಪಂಕಜ, ಆದ್ರೆ ಆ ಬಾಗ್ಲೇನು ಕಬ್ಬಿಣದ ಬಾಗ್ಲೇ, ಒಂದಪ ಬಲವಾಗಿ ಒದ್ರೆ ಬಿದ್ದೋಗೋ ಬಾಗ್ಲು. ಅವಳಂದುಕೊಂಡಂತೆ ಕೃಷ್ಣಪ್ಪ ಗುಡ್ಲ ಬಾಗ್ಲತಾವ ಬಂದ. ಬಾಗ್ಲು ತೆಗೆ ಎಂದ್ರೆ ತೆಗಿಬಾರ್ದು, ಒಂಟಿ ಹೆಣ್ಣಿನ ಮ್ಯಾಕೆ ದಾಳಿ ನಡೆಸೋಕೆ ಅಂತ್ಲೆ ಅವ್ನು ಬರ್ತಿರಾದು, ಎಲ್ಲಾ ಗಂಡಸ್ರ ಗುಣನೂ ಇಷ್ಟೆಯ ಎಂದುಕೊಂಡು ಬಾಗ್ಲು ಬಿಗಿಯಾಗಿ ಮುಚ್ಚಿದ್ಲು. ಹೊರಗೆ ನಿಂತಿದ್ದ ಕೃಷ್ಣಪ್ಪ,

‘ಬಾಗ್ಲು ತೆಗಿಯೆ, ಇಲ್ದೆ ಹ್ವಾದ್ರೆ ಒದ್ದು ಒಳಗೆ ಬರಬೇಕಾಯ್ತದೆ ನನ್ನ ಏನುಂತ ತಿಕ್ಕೊಂಡಿದ್ದೀಯ’ ಎಂದ.

‘ಹಂಗ್ ಮಾಡ್ಬ್ಯಾಡ. ಅವ್ವ ಅಪ್ಪನಿಲ್ಲದ ಅನಾಥೆ ನಾ ಕಾಣ್ಲ. ಒಬ್ಳೆ ಇದ್ದು ಓದ್ಕೊಂಡಿವ್ನಿ. ಸುಮ್ಕೆ ಬಂದ ದಾರಿ ಹಿಡ್ಕಂಡ್ ಹ್ಯಾಗು’ ಎಂದರೆ ಕೃಷ್ಣಪ್ಪ ಕೇಳಿಯಾನೆ. ಬಾಗಿಲು ಒದ್ದು ಒಳಗೆ ಕಾಲಿಟ್ಟೆ ಬುಟ್ಟ, ಎಷ್ಟು ಅತ್ತು ಕರೆದು ಗೋಳಾಡಿದ್ರು ಅವ್ನು ಕೇಳ್ದೆ ಹೋದ. ಬಲವಂತದಿಂದ ಪಂಕಜನ್ನ ಭೋಗಿಸಿಯೇ ಬುಟ್ಟ. ಆ ಮನೆ ಕಟ್ಟಿ ಮುಗ್ಸೋವರ್ಗೂ ಪಂಕಜನ ಕೂಟ ಚೆಂದಾಗೆ ಇದ್ದ. ಏನೋ ಆಗೋದು ಆಗೋಗದೆ, ಸುಮ್ಕೆ ಕುಂತು ಯೋಚ್ಸೋದರಿ ಪ್ರಯೋಜನವಿಲ್ಲ. ಚೆಂದಾಗಿ ಮಡಕೊಂಡವ್ನೆ. ಶಾಲೆ ಫೀಸು ಕೈಗೆ ಕೊಡ್ತವ್ನೆ.